ಆಗದಿದ್ದರೆ, ಬರುವ ಪಂಚಾಯತ್ ಚುನಾವಣೆಯಲ್ಲಿ ನೀವು ಈ ತನಕ ಬೆಂಬಲಿಸಿದ ಅಧ್ಯಕ್ಷ ಸೋಲುತ್ತಾನೆ. ಆತ ದುಷ್ಟ ಮಾತ್ರವಲ್ಲ ಅಹಂಕಾರಿ ಕೂಡಾ. ಪಂಚಾಯತ್ ಚುನಾವಣೆಗೂ ಈ ಹುಚ್ಚುನಾಯಿ ಕಡಿದವರ ಶಾಪ ತಟ್ಟುತ್ತದೆ' ಎಂಬಂತೆ ಮಾತನಾಡಿದರು. ಎಲ್ಲವನ್ನೂ ತಾಳ್ಮೆಯಿಂದ ಕೇಳಿಸಿಕೊಂಡ ಶಾಸಕರು ಒಂದು ಕ್ಷಣ, 'ವಾರದೊಳಗೆ ಇದರ ಪರಿಹಾರ ಮಾಡಿಸಿಕೊಡುತ್ತೇನೆ. ನೀವೆಲ್ಲ ನನಗೆ ವಿರೋಧವಾಗಿ ಮತ ಚಲಾಯಿಸಿದವರು ಎಂದು ಗೊತ್ತು. ನಾವು ಆಡಳಿತ ಪಕ್ಷದವರಾಗಿದ್ದರೆ, ನೀವೆಲ್ಲ ವಿರೋಧ ಪಕ್ಷದವರು ಎಂದು ನಮ್ಮ ಭಾಸ್ಕರ ಹೆಗ್ಡೆ ಹಿಂದೆಯೇ ನನಗೆ ಹೇಳಿದ್ದ. ಆದರೂ ನಾನು ನಿಮ್ಮ ಕೆಲಸ ಮಾಡಿಸಿ ಕೊಡುವುದು ಖಂಡಿತ. ನಾಳೆ ಬೇಕಾದರೆ ನನ್ನ ಕೈಯಿಂದಲೇ ನಿಮ್ಮ ಪಿ.ಎಚ್.ಸಿಗೆ ಹತ್ತು ರೇಬಿಫ್ಯೂರ್ ಇಂಜೆಕ್ಷನ್ ಕೊಟ್ಟು ಕಳುಹಿಸುತ್ತೇನೆ. ಬೀದಿನಾಯಿಗಳ ಕಾಟವನ್ನೂ ನಿಲ್ಲಿಸುತ್ತೇನೆ. ಆದರೆ ಒಂದೇ ಶರ್ತ. ಈಗ ವಿರೋಧ ಪಕ್ಷದಲ್ಲಿರುವ ನೀವು ನಮ್ಮ ಪಕ್ಷಕ್ಕೆ ಬರಬೇಕು. ಬಂದರೆ ಆ ಭಾಸ್ಕರ ಹೆಗ್ಡೆಯನ್ನೂ ಕಿತ್ತೊಗೆದು, ನಿಮ್ಮನ್ನು ಅಂದರೆ ವೀರಪ್ಪಗೌಡರನ್ನೇ ಪಂಚಾಯತ್ ಅಧ್ಯಕ್ಷರಾಗಿ ನಾನು ಕೂರಿಸುತ್ತೇನೆ' ಎಂದರು.

ವೀರಪ್ಪಗೌಡರು ಕುಪ್ಪಣ್ಣಯ್ಯನ ಮುಖ ನೋಡಿದರು. ಉಳಿದವರೂ ಪರಸ್ಪರ ಮುಖ ನೋಡಿಕೊಂಡರು. ಕುಪ್ಪಣ್ಣಯ್ಯನ ತುಟಿ ಅರಳಲಿಲ್ಲ. ಮುಖ ನಿಸ್ತೇಜವಾದ ಹಾಗಾಯಿತು. ಅದನ್ನು ತಕ್ಷಣ ತರ್ಕಿಸಿದ ಶಾಸಕರು ಕುಪ್ಪಣ್ಣಯ್ಯನವರ ಕಡೆಗೆ ಬೆರಳು ಮಾಡಿ ತೋರಿಸುತ್ತಾ ಹೇಳಿದರು. 'ನಿಮ್ಮನ್ನು ಅಂದರೆ ವೀರಪ್ಪಗೌಡರನ್ನು ಹೇಗೆ ಪಂಚಾಯತ್ ಅಧ್ಯಕ್ಷರಾಗಿ ಕೂರಿಸುತ್ತಾರೆ ಎಂಬ ಸಂಶಯ ಇವರಿಗೆ ಇದೆ. ಅದು ಮೀಸಲಾತಿಯಿಂದ ಸಿಗುವ ಸ್ಥಾನವಲ್ಲವೇ ಎಂದು ಅವರು ತರ್ಕಿಸಿರಬೇಕು. ಆದರೆ ಅದು ಇರುವುದು ನನ್ನ ಕೈಯಲ್ಲಿ'

ವೀರಪ್ಪಗೌಡರ ಮುಖ ಹುಣ್ಣಿಮೆಯ ಚಂದ್ರನಂತಾಯಿತು. 'ಆಗಲಿ ಸರ್ ನಾವೆಲ್ಲ ನಿಮ್ಮ ಹಿಂದೆ ಬರುತ್ತೇವೆ. ಆದರೆ ಹತ್ತು ವರುಷದಿಂದ ನಿಮ್ಮ ಕಟ್ಟಾ ಬೆಂಬಲಿಗನಾದ ಭಾಸ್ಕರ ಹೆಗ್ಡೆಗೆ ಇದರಿಂದ ಅಸಮಾಧಾನವಾಗುವುದಿಲ್ಲವೇ?' 'ಏನು ಹೇಳಿದಿರಿ ಗೌಡರೇ, ನಿಮ್ಮ ಹೆಸರು ವೀರಪ್ಪ ಅಲ್ಲವೇ'? ಎಂದು ಪ್ರಶ್ನಿಸುತ್ತಾ ಶಾಸಕರು ಗೌಡರ ಹೆಸರನ್ನು ಖಚಿತ ಮಾಡಿಕೊಂಡು 'ಆ ಭಾಸ್ಕರ ಹೆಗ್ಡೆ ಒಳ್ಳೆಯವನು ಎಂದುಕೊಂಡಿದ್ದೆ. ಆದರೆ ಆತ ಖತರ್ನಾಕು ಮನುಷ್ಯ. ಅವನು ತನ್ನ ಬೆಂಬಲಿಗರಿಗೆಲ್ಲ ಬೇನಾಮಿ ಹೆಸರಿನಲ್ಲಿ ಪಂಚಾಯತ್ ಕಾಮಗಾರಿಗಳನ್ನು ಕೊಡುವುದಲ್ಲದೆ ಅವರಿಂದ ಮೂವತ್ತು ಪರ್ಸೆಂಟು ಕಮಿಶನ್ ಹೊಡೆಯುತ್ತಿದ್ದಾನಂತೆ. ಕುಡಿತ ಜಡಿತವೂ ಪಂಚಾಯತ್‌ನಲ್ಲಿ ಉಂಟಂತೆ. ಅಂಥವರು ಇದ್ದರೆಷ್ಟು ಬಿಟ್ಟರೆಷ್ಟು? ನಾನು ಸುಭಗ ಅಂತ ಹೇಳುವುದಿಲ್ಲ. ನಾನೂ ಇಪ್ಪತ್ತು ಪರ್ಸೆಂಟ್ ತೆಗೆದುಕೊಳ್ಳುವ ವ್ಯಕ್ತಿಯೇ. ನನಗಿಂತ ಹೆಚ್ಚು ಪರ್ಸೆಂಟ್ ತೆಗೆದುಕೊಳ್ಳುವ ಈ ಭಾಸ್ಕರ ಹೆಗ್ಡೆ ಮುಂದೆಲ್ಲಾದರೂ ಶಾಸಕನಾದರೆ ನೂರು ಪರ್ಸೆಂಟ್ ತೆಗೆದುಕೊಳ್ಳುತ್ತಾನೆ. ಅದಕ್ಕಾಗಿ ಈಗಲೇ ಅವನನ್ನು ಚಿವುಟಿ ಹಾಕಬೇಕು' ಎಂದರು.

ಕುಪ್ಪಣ್ಣಯ್ಯನನ್ನು ಹೊರತುಪಡಿಸಿ ಎಲ್ಲರ ಮುಖವೂ ಅರಳಿತು. ಮುಂದಿನ ಭಾನುವಾರ ಶಾಸಕ ಬೋಳ ತಿಮ್ಮಪ್ಪನವರು ವೀರಪ್ಪಗೌಡರು, ದಾಸುಭಟ್ರು ಸೇರಿದಂತೆ ಸೀತಾಪುರದ ಪಂಚಾಯತ್‌ನಲ್ಲಿ ಈ ತನಕ ಇದ್ದ ವಿರೋಧ ಪಕ್ಷದಲ್ಲಿದ್ದ ಎಲ್ಲಾ ಸದಸ್ಯರನ್ನು ತಮ್ಮ ಕೇಚೇರಿಗೆ ಕರೆಸಿ ಪಕ್ಷದ ಧ್ವಜ ನೀಡಿ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡರು. ದಾಸುಭಟ್ರು ಮತ್ತು ವೀರಪ್ಪಗೌಡರು ಎಷ್ಟೇ ಒತ್ತಾಯಿಸಿದರೂ ಕುಪ್ಪಣ್ಣಯ್ಯ ಆ ಪಕ್ಷಾಂತರ ಪರ್ವಕ್ಕೆ ಸಾಕ್ಷಿಯಾಗಲಿಲ್ಲ.

ದಾಸುಭಟ್ರು ಆ ದಿನ ಸಂಜೆ ಏಳು ಗಂಟೆಗೆ ಮನೆಗೆ ಬರುವಾಗ ಅಂಗಳದ ಗೇಟಿನಲ್ಲೇ ಅವರನ್ನು ಸ್ವಾಗತಿಸಿದ ಅವರ ಪತ್ನಿ ಶಾಂತಕ್ಕ ಹೇಳಿದರು. 'ನಮ್ಮ ಬೆಕ್ಕು ಒಂದೂವರೆ ತಿಂಗಳ ಮೇಲೆ ಮನೆಗೆ ಬಂದಿದೆ ನೋಡಿ. ಎಷ್ಟು ಬಡಕಲಾಗಿದೆ ಅಂದರೆ ನನ್ನ ಕರಳು ಉರಿಯುವಷ್ಟು.' ದಾಸುಭಟ್ರ ಮುಖ ಅರಳಿತು. ಅವರು ತನ್ನ ಕಾಲನ್ನು ಸುತ್ತಲು ಬಂದ ಬೆಕ್ಕನ್ನು ಮೆಲ್ಲಗೆ ಎತ್ತಿಕೊಂಡು, 'ಇಷ್ಟು ದಿನ ಎಲ್ಲಿಗೆ ಹೋಗಿದ್ದೀಯೇ ಕಳ್ಳಿ?' ಎಂದು ಅದನ್ನು ಪೂಸಿ ಮಾಡಿದರು. ಈ ಸುದ್ದಿಯನ್ನು ಕುಪ್ಪಣ್ಣಯ್ಯನವರಿಗೆ ಹೇಳಬೇಕೆಂದು ತೋರಿದರೂ, ಮೊಬೈಲು ಇಲ್ಲ ಅನಿಸಿ 'ಇದು ಪಕ್ಕದ ಮನೆಗೆ ಹೋಗಿ ಹೇಳುವಂಥ ವಿಷಯವಲ್ಲ' ಎಂದುಕೊಂಡು 'ಹಾಲಿದ್ದರೆ ಕೊಡು. ಬೆಕ್ಕಿಗೆ ಹಾಕಬೇಕು' ಎಂದರು.

●